# 7. ಹೂಕೋಸು (ಕಾಲಿಫ್ಲಾವರ್)

ಹೂಕೋಸು (ಕಾಲಿ ಫ್ಲಾವರ್) ರಾಜ್ಯದ ಮುಖ್ಯ ತರಕಾರಿ ಬೆಳೆಗಳಲ್ಲಿ ಒಂದಾಗಿದೆ. ಇದು ಚಳಿಗಾಲದ ಬೆಳೆಯಾಗಿದ್ದು ಹೆಚ್ಚಿನ ಪ್ರಮಾಣದಲ್ಲಿ 'ಸಿ' ಅನ್ನಾಂಗವನ್ನು ಒದಗಿಸುತ್ತದೆ.

**ಮಣ್ಣು :** ಈ ತರಕಾರಿಯನ್ನು ಎಲ್ಲಾ ವಿಧವಾದ ಮಣ್ಣುಗಳಲ್ಲಿ ಬೆಳೆಯಬಹುದಾಗಿದೆ. ಇದಕ್ಕೆ ನೀರು ಬಸಿದು ಹೋಗುವಂತಹ ಫಲವತ್ತಾದ ಮರಳು ಮಿಶ್ರಿತ ಗೋಡು ಮಣ್ಣು ಅಥವಾ ಕೆಂಪು ಮಣ್ಣು ಉತ್ತಮ. ಸವಳು ಮಣ್ಣಿನ ವಿದ್ಯುದ್ವಾಹಕತೆ 4 ರಿಂದ 5 ಡೆ.ಸೈ./ಮೀ. ಇರುವಲ್ಲಿ ಬೆಳೆಯಬಹುದು. ಹುಳಿ ಮಣ್ಣಿರುವ ಮತ್ತು ಜೌಗು ಪ್ರದೇಶಗಳು ಈ ಬೆಳೆಗೆ ಉತ್ತಮವಲ್ಲ.

**ಬಿತ್ತನೆ ಕಾಲ :** ಈ ಬೆಳೆಗೆ ತಂಪಾದ ಹವಾಗುಣ ಬೇಕು. ಉಷ್ಣಾಂಶ ಹೆಚ್ಚಾದಲ್ಲಿ ಹೂ ಕೋಸು ಗುಣಮಟ್ಟ ಕಡಿಮೆಯಾಗುತ್ತದೆ. ಅಲ್ಪಾವಧಿ ಹಾಗೂ ಮಧ್ಯಮಾವಧಿ ತಳಿಗಳನ್ನು ಆಗಸ್ಟ್–ಸೆಪ್ಟೆಂಬರ್‌ನಲ್ಲಿ ಮತ್ತು ದೀರ್ಘಾವಧಿ ತಳಿಗಳನ್ನು ಅಕ್ಟೋಬರ್–ನವ್ಹೆಂಬರ್‌ನಲ್ಲಿ ಪ್ರಾರಂಭಿಸಬಹುದಾಗಿದೆ.

**ತಳಿಗಳು**

| | | |
|---|---|---|
| 1. | **ಅರ್ಲಿ ಸ್ನೋಬಾಲ್** | ಇದು 60 ರಿಂದ 80 ದಿವಸಗಳಲ್ಲಿ ಕೊಯ್ಲಿಗೆ ಬರುವ ತಳಿಯಾಗಿದೆ. ಹೂಕೋಸುಗಳು ಒತ್ತಾಗಿದ್ದು ಗಾತ್ರದಲ್ಲಿ ಸಣ್ಣದಾಗಿರುತ್ತವೆ. |
| 2. | **ಸ್ನೋಬಾಲ್** | ಇದು ಮಧ್ಯಮಾಧಿ ತಳಿಯಾಗಿದ್ದು, 80 ರಿಂದ 100 ದಿನಗಳಲ್ಲಿ ಕೊಯ್ಲಿಗೆ ಬರುತ್ತದೆ. ಈ ತಳಿಯ ಹೂಕೋಸುಗಳು ಮಧ್ಯಮ ಗಾತ್ರದ್ದಾಗಿವೆ. |
| 3. | **ಲೇಟ್ ಸ್ನೋಬಾಲ್** | ಇದು ಧೀರ್ಘಾವಧಿ ತಳಿಯಾಗಿದ್ದು, (100 ರಿಂದ 120 ದಿನಗಳು) ಹೂಕೋಸು ಒತ್ತಾಗಿದ್ದು ಬಹಳ ದೊಡ್ಡದಾಗಿರುತ್ತದೆ. |

**ಬೇಸಾಯ ಸಾಮಗ್ರಿಗಳು**

| ಕ್ರ. ಸಂ. | ವಿವರಗಳು | ಪ್ರತಿ ಹೆಕ್ಟೇರಿಗೆ |
|---|---|---|
| 1. | ಬಿತ್ತನೆ ಬೀಜ | 200–250 ಗ್ರಾಂ |
| 2. | ಕೊಟ್ಟಿಗೆ ಗೊಬ್ಬರ | 25 ಟನ್ |
| 3. | ಸಾರಜನಕ | 150 ಕಿ. ಗ್ರಾಂ |
| 4. | ರಂಜಕ | 100 ಕಿ. ಗ್ರಾಂ |
| 5. | ಪೊಟ್ಯಾಷ್ | 125 ಕಿ. ಗ್ರಾಂ |

**ಸಸಿ ಮಡಿ ತಯಾರಿಕೆ :** ಒಂದು ಹೆಕ್ಟೇರಿಗೆ ಬೇಕಾಗುವ ಸಸಿಗಳನ್ನು ಬೆಳೆಸಲು 7.5 ಮೀ ಉದ್ದ 1.2 ಮೀ ಅಗಲ ಮತ್ತು 15 ಸೆಂ. ಮೀ. ಎತ್ತರದ ಸಸಿಮಡಿಗಳನ್ನು ಸಿದ್ಧಪಡಿಸಬೇಕು. ಪ್ರತಿ ಮಡಿಗೂ 25 ರಿಂದ 30 ಕಿ. ಗ್ರಾಂ ಕೊಟ್ಟಿಗೆ ಗೊಬ್ಬರ ಮತ್ತು ಅರ್ಧ ಕಿ. ಗ್ರಾಂ 15:15:15 ಸಂಯುಕ್ತ ಗೊಬ್ಬರವನ್ನು ಮಣ್ಣಿಗೆ ಸೇರಿಸಿ. ಬಿತ್ತುವುದಕ್ಕಿಂತ ಮೊದಲು ಪ್ರತಿ ಹೆಕ್ಟೇರಿಗೆ ಬೇಕಾಗುವ ಬಿತ್ತನೆ ಬೀಜವನ್ನು ಕ್ಯಾಪ್ಟಾನ್ ರಾಸಾಯನಿಕದಲ್ಲಿ 1.5 ಲೀಟರ್ ನೀರಿನಲ್ಲಿ ಕರಗಿಸಿದ ದ್ರಾವಣದಲ್ಲಿ 30 ನಿಮಿಷಗಳ ಕಾಲ ಅದ್ದಿ ತೆಗೆದು ನೆರಳಿನಲ್ಲಿ ಒಣಗಿಸಿ ಬಿತ್ತನೆ ಮಾಡಬೇಕು. 7.5 ಸೆಂ. ಮೀ. ಅಂತರದ ಸಾಲುಗಳಲ್ಲಿ ಬೀಜಗಳನ್ನು ಬಿತ್ತಿ, ಬೀಜದ ಮೇಲೆ ತೆಳುವಾಗಿ ಮಣ್ಣನ್ನು ಹಾಕಿ ನೀರು ಕೊಡಬೇಕು. ಬೇಸಿಗೆಯ ದಿನದಲ್ಲಿ ಬೀಜಗಳು ಮೊಳಕೆಯೊಡೆಯುವವರೆಗೆ ಮಡಿಗಳಿಗೆ ಒಣ ಹುಲ್ಲಿನ ಹೊದಿಕೆಯನ್ನು ಒದಗಿಸಬೇಕು. ಪ್ರತಿ ದಿನ ಮಡಿಗಳಿಗೆ ಮುಂಜಾನೆ ಮತ್ತು ಸಾಯಂಕಾಲ ನೀರನ್ನು ಒದಗಿಸಬೇಕು. ಈ ತರಹ ಬಿತ್ತಿದ ಬೀಜಗಳು 21 ದಿನಗಳಲ್ಲಿ ನಾಟಿಗೆ ಸಿದ್ಧವಾಗುತ್ತವೆ.

**ನಾಟಿ ಮಾಡುವುದು :** ಭೂಮಿಯನ್ನು ಹದಮಾಡಿದ ನಂತರ ಶಿಫಾರಸ್ಸು ಮಾಡಿದ ಪೂರ್ತಿ ಪ್ರಮಾಣದ ಕೊಟ್ಟಿಗೆ ಗೊಬ್ಬರವನ್ನು ಮಣ್ಣಿನಲ್ಲಿ ಚೆನ್ನಾಗಿ ಬೆರೆಸಬೇಕು. ಅಲ್ಪಾವಧಿ ತಳಿಗಳಿಗೆ 45 ಸೆಂ. ಮೀ. ಅಂತರದಲ್ಲಿ ಮತ್ತು ದೀರ್ಘಾವಧಿ ತಳಿಗಳಾದಲ್ಲಿ 60 ಸೆಂ. ಮೀ. ಅಂತರದಲ್ಲಿ ಹರಿಗಳನ್ನು ತಯಾರಿಸಿ, ಹರಿಗಳಲ್ಲಿ ಶಿಫಾರಸ್ಸು ಮಾಡಿದ ಶೇ. 50 ರಷ್ಟು ಸಾರಜನಕ ಮತ್ತು ಪೂರ್ತಿ ಪ್ರಮಾಣದ ರಂಜಕ, ಪೊಟ್ಯಾಷ್ ಗೊಬ್ಬರ ಹಾಕಿ ಮಣ್ಣಿನಲ್ಲಿ ಚೆನ್ನಾಗಿ ಬೆರೆಸಬೇಕು. ನಾಟಿ ಮಾಡುವುದಕ್ಕಿಂತ ಮೊದಲು ಭೂಮಿಗೆ ತೆಳುವಾಗಿ ನೀರನ್ನು ಹಾಯಿಸಬೇಕು. ನಾಟಿ ಮಾಡಿದ ನಂತರ ಪ್ರತಿ 3–4 ದಿನಗಳಿಗೊಮ್ಮೆ ತೆಳುವಾಗಿ ನೀರನ್ನು ಹಾಯಿಸಬೇಕು. ನಾಟಿ ಮಾಡಿದ 4 ವಾರಗಳ ನಂತರ ಶೇ. 50 ರಷ್ಟು ಸಾರಜನಕವನ್ನು ಮೇಲುಗೊಬ್ಬರವಾಗಿ ಕೊಡಬೇಕು. ಭೂಮಿಯನ್ನು ಕಳೆರಹಿತವಾಗಿಡಬೇಕು. ಹೂವಿನ ಚೆಂಡು ಬೆಳೆಯುವ ಹಂತದಲ್ಲಿ ಹೂವನ್ನು ಎಲೆಗಳಿಂದ ಮುಚ್ಚಬೇಕು. ಇದರಿಂದ ಆಕರ್ಷಕ ಬಿಳಿ ಬಣ್ಣದ ಹೂಗಳನ್ನು ಪಡೆಯಲು ಸಾಧ್ಯ.

**ಸಸ್ಯ ಸಂರಕ್ಷಣೆ :** ಎಲೆಕೋಸಿಗೆ ಸೂಚಿಸಲಾದ ಸಸ್ಯ ಸಂರಕ್ಷಣಾ ಕ್ರಮಗಳನ್ನೇ ಈ ಬೆಳೆಗೂ ಅನುಸರಿಸಬೇಕು.

| **ಇಳುವರಿ** | **ಪ್ರತಿ ಹೆಕ್ಟೇರಿಗೆ** |
|---|---|
| ಅಲ್ಪಾವಧಿ ಮತ್ತು ಮಧ್ಯಮಾವಧಿ ತಳಿಗಳು | 15 ರಿಂದ 20 ಟನ್ |
| ಧೀರ್ಘಾವಧಿ ತಳಿಗಳು | 20 ರಿಂದ 25 ಟನ್ |

**ಸೂಚನೆ :** ಬೀಜಗಳನ್ನು ಪ್ರಮಾಣೀಕರಿಸಿದ ಸಂಸ್ಥೆಗಳಿಂದ ಮಾತ್ರ ಪಡೆಯಬೇಕು. ಬೆಳೆಯನ್ನು ಹೆಚ್ಚು ಪ್ರದೇಶದಲ್ಲಿ ಬೆಳೆಯುವಂತಿದ್ದರೆ ಭದ್ರಪಡಿಸಿದ ಡಬ್ಬಗಳಲ್ಲಿರುವ ಶಿಫಾರಸ್ಸು ಮಾಡಿದ ತಳಿಗಳ ಬೀಜಗಳನ್ನು ಉಪಯೋಗಿಸಬೇಕು. ಕಳಪೆ ಬೀಜದಿಂದ ಬೆಳೆ ಸರಿಯಾಗಿ ಬರುವುದಿಲ್ಲ.